# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸಕಾಅ/ವಾ.ನಂ.39/ಪಿಆರ್/390/2021-22

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ದಾಸರಹಳ್ಳಿ ವಲಯ
ಹೆಚ್.ಎಂ.ಟಿ.ಬಡಾವಣೆ, ನಾಗಸಂದ್ರ ಪೋಸ್ಟ್
ಬೆಂಗಳೂರು, ದಿನಾಂಕ : 23-03-2022

## ವಾರ್ಡ್ -39ರ ವಾರ್ಡ್ ಸಭೆಯ ನಡವಳಿ

ದಿನಾಂಕ:-05-03-2022 ರಂದು ಪೀಣ್ಯ ಕೈಗಾರಿಕ ಪ್ರದೇಶ ಉಪ ವಿಭಾಗ ವಾರ್ಡ್ ನಂ.39 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಪುಟ್ಟಸ್ವಾಮಿ ಜೆ, ವಾರ್ಡ್-39 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದ್ದವರು:

1. ಶ್ರೀ ಪುಟ್ಟಸ್ವಾಮಿ ಜೆ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀಮತಿ.ಅರ್ಚನ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀ.ರಾಮಕೃಷ್ಣ, ಮೌಲ್ಯ ಮಾಪಕರು, ವಾ.ನಂ.39
4. ಶ್ರೀ ಹೆಚ್.ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು
5. ಡಿ.ಆರ್.ಮಾಳಯ್ಯ, ನೀರು ಸರಬರಾಜು ಸಹಾಯಕರು ವಾ.ನಂ.39
6. ರಮೇಶ್.ಟಿ. ನೀರು ಸರಬರಾಜು ಸಹಾಯಕರು ವಾ.ನಂ.39

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು

- ಹಿಂದಿನ ಸಭೆಯ ನಡವಳಿಗಳು ಓದಿ ರೆಕಾರ್ಡ್ ಮಾಡಲಾಯಿತು ಅದರಂತೆ ಡಿ.ಡಬ್ಲ್ಯೂ.ಸಿ.ಸಿ ಸೆಂಟರ್‌ನಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ತುರ್ತಾಗಿ ಕ್ರಮವಹಿಸುವಂತೆ ತಿಳಿಸಲಾಯಿತು.
- ಡಿ.ಡಬ್ಲ್ಯೂ.ಸಿ.ಸಿ ಸೆಂಟರ್ ವಾರ್ಡ್ ನಂ.39 ರಲ್ಲಿ ಶೌಚಾಲಯಕ್ಕೆ ನೀರಿನ ವ್ಯವಸ್ಥೆ ತುರ್ತಾಗಿ ಕಲ್ಪಿಸುವಂತೆ ಅಂದಾಜು ಪಟ್ಟಿ ತಯಾರಿಸಿ ಕೆಲಸ ಪ್ರಾರಂಭಿಸುವಂತೆ ನಿರ್ಣಯಿಸಲಾಯಿತು.
- ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ ವಾರ್ಡ್ ಸಂಖ್ಯೆ 39 ರಲ್ಲಿ ಗುತ್ತಿಗೆದಾರರಿಂದ ಸ್ವಚ್ಛತೆ ಕೆಲಸ ನಡೆಯುತ್ತಿದ್ದು ಜಿ.ಪಿ.ಎಸ್ ಮತ್ತು ಆರ್ ಎಫ್ ಐ ಡಿ ವಿಧಾನವನ್ನು ಆಟೋ ಟಿಪ್ಪರ್‌ಗಳಿಗೆ ಅಳವಡಿಸಲಾಗಿದ್ದು ಅದರಂತೆ ನಿರ್ವಹಿಸಲಾಗುತ್ತಿದೆ.

  ಪೌರಕಾರ್ಮಿಕರಿಗೆ Street ID ಯಂತೆ ರಸ್ತೆಯನ್ನು ನೀಡಲಾಗಿದ್ದು ಪ್ರತಿನಿತ್ಯ ಬೀದಿ ಕಸ ಗುಡುಸುವುದನ್ನು ಪರಿಶೀಲಿಸಲುವುದು ಯಾವುದೇ ಘನತ್ಯಾಜ್ಯ ಸಮಸ್ಯೆಯನ್ನು ತುರ್ತಾಗಿ ಪರಿಹರಿಸುವುದು ಎಂದು ಸಭೆಗೆ ಮಾಹಿತಿ ನೀಡಿದರು.
- ಬೀದಿ ದೀಪಗಳ ನಿರ್ವಹಣೆ ಬಗ್ಗೆ ಬೀದಿ ದೀಪ ನಿರ್ವಹಣೆಯವರು ಮಾತನಾಡುತ್ತಾ ತುರ್ತಾಗಿ ರಿಪೇರಿ ಮಾಡುವಂತೆ ತಿಳಿಸಲಾಯಿತು. ಅಧ್ಯಕ್ಷರು ಮಾತನಾಡುತ್ತಾ ಬೀದಿದೀಪವನ್ನು ರಾತ್ರಿ ವೇಳೆ ಪರಿಶೀಲಿಸಿ ಬೆಳಿಗ್ಗೆ ತುರ್ತಾಗಿ ಸರಿಪಡಿಸುವಂತೆ ತಿಳಿಸಲಾಯಿತು.
- ಸಿ.ಸಿ.ಟಿ.ವಿ ಬಗ್ಗೆ ಅನುದಾನ ಇಲ್ಲದಿರುವುದರಿಂದ ಮೇಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸುವಂತೆ ಅಧ್ಯಕ್ಷರು ಸಭೆಗೆ ಸೂಚಿಸಿದರು

- ಉದ್ಯಾನವಗಳು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ವಾಕಿಂಗ್ ಮಾಡಲು ಅ
ಕಾಪಾಡುವಂತೆ ಸೂಚಿಸಲಾಯಿತು.
- ವಾರ್ಡನಲ್ಲಿ ಗುಂಡಿಮುಚ್ಚುವ ಕೆಲಸ ನಡೆಯುತ್ತಿದೆ ತುರ್ತಾಗಿ ಗುಂಡಿ ಮುಚ್ಚುವ ಕೆಲ
ಹೆಚ್.ಎಂ.ಟಿ ಬಡಾವಣೆ ಮತ್ತು ವಿಕಾಸನಗರ ಮತ್ತು ವಿನಾಯಕ ನಗರ ಗಳಲ್ಲಿ ಗುಂಡಿಮುಚ್ಚುವ ಕೆಲಸ ನಡೆಯುತ್ತಿದೆ ಎಂದುತಿಳಿಸಲಾಯಿತು.
- ನಾಗಸಂದ್ರದಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ ನಿರ್ವಹಿಸಲಾಯಿತು ಹಾಗೂ ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ.
- ಮಾರುತಿ ಬಡಾವಣೆಯ 1ನೇ,3ನೇ,4ನೇ,5ನೇ& 6ನೇ ಅಡ್ಡ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಯಿತು.
- ಚೊಕ್ಕಸಂದ್ರ ಮುಖ್ಯರಸ್ತೆ ಹಾಗೂ 1ನೇ, 2ನೇ & 3ನೇ, 15ನೇ ಅಡ್ಡ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಯಿತು.
- ನಾರಾಯಣ ಪುರ ಮುಖ್ಯ ರಸ್ತೆಯ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.
- ನಾಗಸಂದ್ರದ ಜೋಡಿಬಾವಿ ರಸ್ತೆಯ 1ನೇ,2ನೇ,3ನೇ ಮತ್ತು ಶೋಭಾ ಅಪಾರ್ಟಮೆಂಟ್ ಹತ್ತಿರದ ಮುಖ್ಯ ರಸ್ತೆಯ ಕಾಂಕ್ರೀಟೀಕರಣದ ಕಾರ್ಯ ಪ್ರಗತಿಯಲ್ಲಿದೆ.
- ನಾಗಸಂದ್ರದ ಮುಖ್ಯರಸ್ತೆಯ ಡಾಂಬರೀಕರಣದ ಕಾಮಗಾರಿಯು ಪ್ರಗತಿಯಲ್ಲಿದೆ.
- ರಸ್ತೆಗಳಿಗೆ ಗುಂಡಿ ಮುಚ್ಚುವ ಕಾಮಗಾರಿಗೆ ಅವಶ್ಯಕವಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಿದೆ.
- ಬೆಲ್ಮಾರ್ ಲೇಔಟ್‌ನಲ್ಲಿ ಕಲ್ವರ್ಟ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿದೆ.
- ರುಕ್ಮಿನಿ ನಗರ ಮತ್ತು ಗೃಹಲಕ್ಷ್ಮಿ ಲೇಔಟ್‌ನಲ್ಲಿ ಕಲ್ವರ್ಟ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿದೆ.
- ಸಹಾಯ ಹ್ಯಾಪ್‌ನ ಕಂಪ್ಲೇಟ್ಗಳನ್ನು ಅಟೆಂಡ್ ಮಾಡಲಾಗುತ್ತಿದೆ.
- ಚರಂಡಿಗಳಲ್ಲಿನ ಹೂಳು ಎತ್ತುವ ಕಾಮಗಾರಿಯು ಪ್ರಗತಿಯಲ್ಲಿದ್ದು, ನೆಲಗದರನಹಳ್ಳಿಯ ಅಡ್ಡರಸ್ತೆಗಳಲ್ಲಿ ನಿರ್ವಹಿಸಲಾಗುತ್ತಿದೆ.
- ಬೆಲ್ಮಾರ್ ಲೇಔಟ್‌ನಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದೆ.
- ಅಮರಾವತಿ ಬಡಾವಣೆ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದೆ.
- ಚೊಕ್ಕಸಂದ್ರ 5ನೇ ಅಡ್ಡರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪೂರ್ಣಗೊಂಡಿದೆ.
- ಚೊಕ್ಕಸಂದ್ರ 6ನೇ ಅಡ್ಡರಸ್ತೆಯಲ್ಲಿ ಚರಂಡಿಯಲ್ಲಿ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿದೆ.

ಮು.ತಿ.ನೋ

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸದಸ್ಯ ಕಾರ್ಯದರ್ಶಿ 23/03/22 | ವಾರ್ಡ್ ಸಮಿತಿ ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ |
| ವಾರ್ಡ್ ನಂ. 39 ಚೊಕ್ಕಸಂದ್ರ | ವಾರ್ಡ್ ನಂ. 39 ಚೊಕ್ಕಸಂದ್ರ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

<u>ಅಧಿಕಾರಿಗಳ ಮಾಹಿತಿಗಾಗಿ</u>

1.ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2.ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3.ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4.ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5.ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೀ.ಕೈ.ಪ್ರ)ರವರ ಮಾಹಿತಿಗಾಗಿ ಕಳುಹಿಸಿದೆ
6.ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
7.ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
8.ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
9.ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
10.ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
11.ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ